ತಾನೆಲ್ಲಿದ್ದೇನೆ ಅನ್ನುವ ಅರಿವು ಮೂಡತೊಡಗಿತ್ತು.

ಮುಂದೆ ವರ್ಷಾನುಗಟ್ಟಲೇ ಹೀಗೇ ಕಳೆದ ಸರಸ್ವತಿ ತನ್ನ ಅತ್ತೆಯ ಮಾತನ್ನು ವಿರೋಧಿಸಿ ಗಂಡನೊಡನೆ ಹುಬ್ಬಳ್ಳಿಯ ಈ ಅಪಾರ್ಟ್‌ಮೆಂಟಿನ ಪುಟ್ಟ ಮನೆಗೆ ತನ್ನ ಕನಸು ಸಾಗಿಸಲು ಹರಸಾಹಸವೇ ಪಡಬೇಕಾಯ್ತು. ಸಂಕ್ರಮಣ ಹಬ್ಬಕ್ಕೆಂದು ಹಾವೇರಿಗೆ ಬಂದವಳು ನಂತರ ಅತ್ತೆಯ ಬಳಿ ಹಿಂದಿರುಗದೇ ಸೀದಾ ಗಂಡನ ರೂಮಿಗೆ ಬಂದು 'ನಿಮ್ಮವ್ವನ ಕಡೀ ಅಡಗೀ ಮಾಡಾಕ ನನ್ನ ಮದ್ವೀ ಮಾಡ್ಕೊಂಡೆನ?' ಅನ್ನುತ್ತ ಜಗಳ ತೆಗೆದು ಇಲ್ಲೇ ಉಳಿದುಕೊಂಡುಬಿಟ್ಟಳು. ಮುಂದೆ ಅವಳ ಅತ್ತೆ ರೇಣುಕಮ್ಮನೇ ವರವರ ಗುಟ್ಟುವಂತೆ 'ಎಣಿಸಿ ಎಣಿಸಿ ಎಂಟೇ ರೊಟ್ಟಿ, ಆರೇ ಬದನೆ ಎಣಗಾಯಿ, ನಾಲ್ಕೇ ಬೊಗಸೆ ಶೇಂಗಾ ಚಟ್ನಿ, ಎರಡೇ ಮುಷ್ಟಿ ರಂಜಕ, ಒಂದೇ ಬಟ್ಲ ಮೊಸರು, ಮಕ್ಕಳ ಬ್ಯಾಡಾ ಮರೀ ಬ್ಯಾಡಾ, ಯಾರ ದರಕಾರ ಇಲ್ಲದನ ಗಂಡಗ ಹೇಂತಿ, ಹೇಂತೀಗ ಗಂಡ' ಎನ್ನುವ ರೀತಿಯಲ್ಲಿ ಬದುಕು ಕಟ್ಟಿಕೊಳ್ಳುತ್ತ ಹದಿನೈದು ವರ್ಷ ಸವೆಸಿಬಿಟ್ಟಳು. ಆಗಲೇ ಸಿಂಡಿಕೇಟ್ ಬ್ಯಾಂಕಿನವರು ಒಮ್ಮೆ ತಮ್ಮೆಲ್ಲ ಸ್ಟಾಫಿನವರಿಗೆ, 'ಬ್ಯಾಂಕು ಉಚಿತ ಕಂಪ್ಯೂಟರ್ ತರಬೇತಿ ಕ್ಲಾಸ್ ನಡಿಸ್ತದೆ, ನಿಮ್ಮ ಜೊತೆ ನಿಮ್ಮ ಫ್ಯಾಮಿಲಿಯನ್ನೂ ಕರ್ಕೊಂಬನ್ನಿ' ಅಂತ ಒಂದು ಉಪಯುಕ್ತ ಶಿಬಿರದ ಯೋಜನೆ ಆರಂಭಿಸಿದ್ದೇ, ಅತ್ಯುತ್ಸಾಹದಿಂದ ಅಲ್ಲಿ ಪ್ರವೇಶ ಪಡೆದ ಮೊದಲ ವಿದ್ಯಾರ್ಥಿ ಎಂದರೆ ಈ ನಮ್ಮ ಸರಸ್ವತಿಯೇ.

ಮೊದಲು ಕಂಪ್ಯೂಟರ್ ಆನ್ ಮಾಡಲು ಆಫ್ ಮಾಡಲು ಕಲಿಸಿದ ಅವರು ನಂತರ ನಿಧಾನವಾಗಿ ಅದರಲ್ಲಿರುವ ವಿಡಿಯೋ ಗೇಮ್ ಆಡಲು, ಅವರವರ ಹೆಸರಿನ ಮೇಲ್ ಓಪನ್ ಮಾಡಿ ಪರಸ್ಪರ ಸಂಭಾಷಿಸಲು, ಆನ್‌ಲೈನ್‌ನಲ್ಲಿ ಸಿನಿಮಾಗಳನ್ನು ನೋಡಲು, ಯಾವುದೇ ಮಾಹಿತಿ ಬೇಕಿದ್ದರೂ ಅದರ ಪುಟ ತೆಗೆದು ಹುಡುಕಲು, ಇಂಥ ಕೆಲವು ಮಹತ್ವದ ಸಂಗತಿಗಳ ಜೊತೆಗೆ, ಕಂಪ್ಯೂಟರ್ ಕಲಿಯಲು ಬಂದ ಬ್ಯಾಂಕಿನ ಫ್ಯಾಮಿಲಿಯವರನ್ನೆಲ್ಲ ಸೇರಿಸಿ ಒಂದು ನೆಟ್‌ವರ್ಕನ್ನು ಅವರೇ ಮಾಡಿಕೊಟ್ಟು, ಅದನ್ನು ನಿರ್ವಹಿಸುವುದನ್ನೂ ಕಲಿಸಿಕೊಟ್ಟಿದ್ದರು. ಮತ್ತು ತರಬೇತಿಯ ನಿಯಮದಂತೆ ಅರ್ಧ ದರಕ್ಕೆ ಮನೆಗೊಂದರಂತೆ ಕಂಪ್ಯೂಟರನ್ನೂ ನೀಡಿದ್ದರು. ಹಾಗೆ ಕಂಪ್ಯೂಟರ್ ತರಬೇತಿ ಮುಗಿದ ಮಾರನೆ ದಿನದಿಂದಲೇ, ಅಲ್ಲಿ ಕ್ಲಾಸಿನಲ್ಲಿ ಹೇಳಿಕೊಟ್ಟ ರೀತಿಯಲ್ಲೇ ಸರಸ್ವತಿ ದಿನವೂ ತನ್ನ ತಿಳಿವಳಿಕೆಯಲ್ಲೇ ಅಭ್ಯಾಸ ಮಾಡತೊಡಗಿದ್ದಳು.

ಹೀಗೆ ಬ್ಯಾಂಕಿನ ಸ್ಟಾಫಿನ ಕುಟುಂಬವಷ್ಟೇ ಸ್ನೇಹಿತರಾಗಿದ್ದ ಸಣ್ಣ ಗುಂಪನ್ನು ಈಗ ಸರಸ್ವತಿ, ಕೂಸಿನ ಜವಳ, ಮದುವೆಗಳಂತಹ ಕಾರ್ಯಕ್ರಮಗಳಿಗೆ ಹೋದಾಗ, ತನ್ನ ಸಂಬಂಧಿಗಳು ಸಿಕ್ಕಾಗಲೆಲ್ಲ 'ನೀನ್ ಫೇಸ್‌ಬುಕ್‌ನಾಗ ಅದೀಯೆನ?' ಅಂತ ಕೇಳಿ ಕೇಳಿ ಅವರಿವರ ತಲೆತಿಂದು, ಫೇಸ್‌ಬುಕ್‌ನಲ್ಲಿ ಇದ್ದಂಥ ಮಹನೀಯರಿಗೆಲ್ಲ ಅವರು ಫೀಡ್ ಮಾಡಿದ ಹೆಸರನ್ನು ಸರಿಯಾಗಿ ತಿಳಿದುಕೊಂಡು, ಮನೆಗೆ ಬಂದವಳೇ ಅವರ ಅಕೌಂಟ್ ಹುಡುಕಿ, ಫ್ರೆಂಡ್ ರಿಕ್ವೆಸ್ಟ್ ಕಳಿಸಿ ಸ್ನೇಹಬಳಗ ಹೆಚ್ಚಿಸಿಕೊಂಡಳು. 'ಯಾರರ ತಾಂವ್ ಫೇಸ್‌ಬುಕ್‌ನಾಗ್ ಇಲ್ಲ ಅಂದ್ ಕೂಡ್ಲೇ, ಅವರ್ ಬದುಕೇ ಇಲ್ಲ ಅನ್ನೋ ಹಾಂಗ ಆಡ್ತೀಯಲ್ಲ?' ಅಂತ ಗಂಡ ಶಂಕರನೊಡನೆಯೂ ಹಲವು ಸಲ ಬೈಸಿಕೊಂಡಳು. ಕೆಲವೊಮ್ಮೆ 'ನೀನ ಇಲ್ಲ ಫೇಸ್‌ಬುಕ್‌ನಾಗ, ಅದಕ ನಿನಗ ಅದರ ಮಜಾ ಗೊತ್ತಿಲ್ಲ' ಅಂತ ಅವನನ್ನೇ ದಬಾಯಿಸುತ್ತಿದ್ದಳು.

ಶಂಕರ ತನ್ನ ಬ್ಯಾಂಕಿನ ಕೆಲ ವ್ಯವಹಾರಗಳನ್ನು ಕಂಪ್ಯೂಟರ್‌ನಲ್ಲಿ ಮನೆಯಿಂದಲೇ ಪೂರೈಸುವ ಕಾರಣಕ್ಕಾಗಿ ಮನೆಗೆ ಬಂದ ಆ ಕಂಪ್ಯೂಟರ್ ಈಗ ಇಡೀ ದಿನ ಸರಸ್ವತಿಯ ಸ್ವತ್ತಾಗಿಬಿಟ್ಟಿತ್ತು. ಶಂಕರ ತನ್ನ ಸ್ಮಾರ್ಟ್‌ಫೋನ್‌ನಲ್ಲೇ ಸಣ್ಣ ಪುಟ್ಟ ಕೆಲಸ ಪೂರೈಸುತ್ತಿದ್ದ. ಸಂಜೆ ಆರೂವರೆಗೆಲ್ಲ